# ಎಸ್.ಜಿ. ಸಿದ್ದರಾಮಯ್ಯನವರ ಕಾವ್ಯದಲ್ಲಿ ಸಂಪ್ರದಾಯ, ನಂಬಿಕೆ ಮತ್ತು ಆಚರಣೆಗಳು

**ಮಲ್ಲಿಕಾರ್ಜುನಪ್ಪ ಎನ್.ಎಸ್.***

**DOI: https://doi.org/10.5281/zenodo.21793877**

**ABSTRACT**

ಸಂಪ್ರದಾಯ, ನಂಬಿಕೆ ಮತ್ತು ಆಚರಣೆಗಳು ಮಾನವ ಸಮಾಜದ ಸಾಂಸ್ಕೃತಿಕ ಬೇರುಗಳಾಗಿದ್ದು, ಇವುಗಳ ದಟ್ಟವಾದ ಚಿತ್ರಣ ಎಸ್.ಜಿ. ಸಿದ್ದರಾಮಯ್ಯನವರ ಕಾವ್ಯದಲ್ಲಿ ಅನಾವರಣಗೊಂಡಿದೆ. ಕವಿಯು ಗ್ರಾಮೀಣ ಬದುಕಿನ ಜಾತ್ರೆ ಹಾಗೂ ಹಬ್ಬಗಳಂತಹ ಸಕಾರಾತ್ಮಕ ಆಚರಣೆಗಳನ್ನು ನೆಲಮೂಲ ಸಂಸ್ಕೃತಿಯ ಜೀವಂತ ಪ್ರತೀಕಗಳಾಗಿ ಗೌರವಿಸುತ್ತಾರೆ. ಆದರೆ, ಸಾಮಾಜಿಕ ಅಸಮಾನತೆ ಮತ್ತು ಶೋಷಣೆಯನ್ನು ಬಿಂಬಿಸುವ 'ಮಡೆಸ್ನಾನ'ದಂತಹ ಅಮಾನವೀಯ ಮೂಢನಂಬಿಕೆಗಳನ್ನು, ಜ್ಯೋತಿಷ್ಯದ ಅವೈಜ್ಞಾನಿಕ ನಂಬಿಕೆಗಳನ್ನು ಹಾಗೂ ಶಕುನ-ಅಪಶಕುನಗಳನ್ನು ತಾರ್ಕಿಕ ಮತ್ತು ವೈಚಾರಿಕ ನೆಲೆಗಟ್ಟಿನಲ್ಲಿ ಕಟುವಾಗಿ ವಿರೋಧಿಸುತ್ತಾರೆ. ಕನಸುಗಳನ್ನು ಕೇವಲ ಸುಪ್ತಪ್ರಜ್ಞೆಯ ನೆನಪುಗಳೆಂದು ವಿಶ್ಲೇಷಿಸುವ ಇವರು, ಸಮಾಜದ ಏಳಿಗೆಗಾಗಿ ಮೌಲ್ಯಯುತವಾದ ಸಂಪ್ರದಾಯಗಳನ್ನು ಉಳಿಸಿಕೊಂಡು, ಹಾನಿಕಾರಕ ಮೌಢ್ಯಗಳನ್ನು ತ್ಯಜಿಸುವ ಮೂಲಕ ಆರೋಗ್ಯಕರ ಮತ್ತು ಪ್ರಗತಿಪರ ಸಮಾಜವನ್ನು ನಿರ್ಮಿಸುವ ಆಶಯವನ್ನು ತಮ್ಮ ಕಾವ್ಯದ ಮೂಲಕ ಅಭಿವ್ಯಕ್ತಪಡಿಸಿದ್ದಾರೆ.

**KEYWORDS:** ಎಸ್.ಜಿ. ಸಿದ್ದರಾಮಯ್ಯನವರ ಕಾವ್ಯ, ಸಂಪ್ರದಾಯ ಮತ್ತು ಆಚರಣೆಗಳು, ಮೂಢನಂಬಿಕೆಗಳ ವಿರೋಧ, ಮಡೆಸ್ನಾನದ ವಿಮರ್ಶೆ, ವೈಚಾರಿಕ ಪ್ರಜ್ಞೆ.

* **ಮಲ್ಲಿಕಾರ್ಜುನಪ್ಪ ಎನ್.ಎಸ್.,** ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿಕಾರಿಪುರ.

ಸಂಪ್ರದಾಯ, ನಂಬಿಕೆ, ಮತ್ತು ಆಚರಣೆಗಳು ಒಂದು ಸಮಾಜದ ಸಾಂಸ್ಕೃತಿಕ ಜೀವನದ ಜೀವಾಳವಾಗಿವೆ. ಅವು ಕೇವಲ ಹಿಂದಿನ ತಲೆಮಾರುಗಳಿಂದ ಬಂದ ಪದ್ಧತಿಗಳಷ್ಟೇ ಅಲ್ಲ; ಮಾನವ ಬದುಕಿಗೆ ಮೌಲ್ಯ, ಶಿಸ್ತು, ಏಕತೆ ಮತ್ತು ಆತ್ಮೀಯತೆಯನ್ನು ನೀಡುವ ದ್ರವ್ಯಧಾತುಗಳಾಗಿವೆ. ಪ್ರತಿಯೊಂದು ಸಂಪ್ರದಾಯದ ಹಿಂದೆ ಜೀವನಾನುಭವ, ಪ್ರತಿಯೊಂದು ನಂಬಿಕೆಯ ಹಿಂದೆ ಮನೋಬಲ, ಪ್ರತಿಯೊಂದು ಆಚರಣೆಯ ಹಿಂದೆ ಸಾಮಾಜಿಕ ಹಾಗೂ ಆಧ್ಯಾತ್ಮಿಕ ಮಹತ್ವವಿದೆ. ಕಾಲ ಬದಲಾದರೂ ಕೂಡ ಸಂಪ್ರದಾಯಗಳು ನಮ್ಮ ಸಂಸ್ಕೃತಿಯ ಬೇರುಗಳನ್ನು ಗಟ್ಟಿಗೊಳಿಸಿವೆ. ಅವು ನಮ್ಮನ್ನು ಇತಿಹಾಸದೊಂದಿಗೆ ಬೆಸೆಯುವುದರೊಂದಿಗೆ ಮುಂದಿನ ಪೀಳಿಗೆಗೆ ನಮ್ಮ ಪರಂಪರೆಯನ್ನು ಪರಿಚಯಿಸುವ ಸೇತುವೆಗಳಾಗಿವೆ. ಅವು ಗ್ರಾಮೀಣ ಜನರ ದಿನನಿತ್ಯದ ಬದುಕಿನಿಂದ ಹುಟ್ಟಿಬಂದವುಗಳಾಗಿವೆ. ಆದ್ದರಿಂದ ದೇಸಿ ಸಾಹಿತ್ಯದಲ್ಲಿ ಸಂಪ್ರದಾಯ, ನಂಬಿಕೆ, ಆಚರಣೆಗಳು ಜೀವಂತವಾಗಿ, ಸಹಜವಾಗಿ ಮೂಡಿಬರುತ್ತವೆ. ಗ್ರಾಮೀಣ ಸಂಪ್ರದಾಯಗಳು, ಆಚರಣೆಗಳು, ಆಚರಣೆಯ ಹಿಂದೆ ಇರುವ ನಂಬಿಕೆಗಳು, ಜೀವನ ಮೌಲ್ಯಗಳು ಆ ಸಮುದಾಯದಲ್ಲಿ ಸ್ಪಷ್ಟವಾಗಿ ಗೋಚರಿಸುತ್ತವೆ. ಅವು ಅಲ್ಲಿ ಜನರ ಅನುಭವ, ಭಯ-ಭಕ್ತಿ, ಪರಿಸರ ಮತ್ತು ಸಾಮಾಜಿಕ ಅವಶ್ಯಕತೆಗನುಸಾರವಾಗಿ ಬೆಳೆದುಬಂದಿರುತ್ತವೆ.

ಒಂದು ಸಮಾಜ, ಕುಟುಂಬ ಅಥವಾ ಸಮುದಾಯದಲ್ಲಿ ಪೀಳಿಗೆಯಿಂದ ಪೀಳಿಗೆಗೆ ಹರಿದು ಬಂದಿರುವ, ಆಚರಣೆಗಳು (ಹಬ್ಬಗಳು, ಮದುವೆಗಳು, ಪೂಜೆಗಳು ಇತ್ಯಾದಿ), ನಂಬಿಕೆಗಳು ಮತ್ತು ನಡೆನುಡಿಗಳನ್ನು ಒಟ್ಟಾಗಿ ಸೇರಿಸಿ ಸಂಪ್ರದಾಯ ಎಂದು ಕರೆಯುತ್ತೇವೆ. ಮಾನವ ಜೀವನವನ್ನು ರೂಪಿಸುವಲ್ಲಿ, ಸಂಸ್ಕೃತಿಯನ್ನು ಪೋಷಿಸುವಲ್ಲಿ, ನಾಗರಿಕತೆಯನ್ನು ಬೆಳೆಸುವಲ್ಲಿ ಸಂಪ್ರದಾಯಗಳಿಗೆ ಮಹತ್ವವಾದ ಸ್ಥಾನವಿದೆ. ಜಗತ್ತಿನ ಸಕಲ ರಾಷ್ಟ್ರಗಳ ಕಾನೂನು ರಚನೆಗೂ ಕೂಡ ಸಂಪ್ರದಾಯಗಳೇ ಮೂಲಾಧಾರವಾಗಿವೆ. "ನೈಸರ್ಗಿಕ ಶಕ್ತಿಯನ್ನು ವೃದ್ಧಿಗೊಳಿಸುವ, ನಿಸರ್ಗದೊಡನೆ ಗೆಳೆತನ ಬೆಳೆಸುವ ಉದ್ದೇಶದಿಂದ ವಿಧಿಕ್ರಿಯೆಗಳು ಉಗಮಗೊಳ್ಳುತ್ತವೆ. ಬಿತ್ತನೆ, ಕಟಾವು, ಒಕ್ಕಣೆ ಋತುಮಾನಾನುಸಾರಿಯಾದ್ದರಿಂದ ಅವು ವಿಧಿಕ್ರಿಯೆಗಳಾಗವು. ಆ ಕೃಷಿ ಕರ್ಮಗಳಿಗೆ ಸಂಬಂಧಿಸಿದ ಕುಣಿತ, ಹಾಡು, ಹಬ್ಬ, ಹರಿದಿನಗಳು ವಿಧಿಕ್ರಿಯೆಗಳಾಗುತ್ತವೆ. ಮುಂದೆ ಅವೇ ಸಂಪ್ರದಾಯಗಳಾಗುತ್ತವೆ"[1] ಎಂಬ ದೇಜಗೌರವರ ಅಭಿಪ್ರಾಯ ಒಪ್ಪತಕ್ಕುದ್ದಾಗಿದೆ. ಸಂಪ್ರದಾಯಗಳು ಮೂಲತಃ ವ್ಯಕ್ತಿಗತ ವಾಡಿಕೆಯಿಂದ ಸಾಮೂಹಿಕ ಸ್ವರೂಪವನ್ನು ಪಡೆಯುತ್ತವೆ. ಇಡೀ ಸಮಾಜದ ಅಥವಾ ಒಂದು ನಿರ್ದಿಷ್ಟ ಪ್ರದೇಶದ ಜನತೆಯ ಅಂಗೀಕಾರ ಮುದ್ರೆಯನ್ನು ಪಡೆಯದ, ಕೇವಲ ಒಂದು ಗುಂಪಿಗೆ ಅಥವಾ ಕುಟುಂಬಕ್ಕೆ ಸೀಮಿತಗೊಂಡಿರುವ ಆಚರಣೆಗಳು ಸಂಪ್ರದಾಯವೆನಿಸಿಕೊಳ್ಳುವುದಿಲ್ಲ; ಕೇವಲ ವಾಡಿಕೆಗಳಾಗಿಯೋ, ರೀತಿಗಳಾಗಿಯೋ ಉಳಿದುಬಿಡುತ್ತವೆ. ಯಾವುದೋ ಒಂದು ವೃತ್ತಿ ಅಥವಾ ವ್ಯಾಪಾರ, ಉದ್ಯೋಗಕ್ಕೆ ಸಂಬಂಧಿಸಿದ ಕ್ರಿಯೆ ವಾಡಿಕೆಯಾದರೆ, ವೇಷಭೂಷಣ ಹವ್ಯಾಸಗಳಿಗೆ ಸಂಬಂಧಿಸಿದ ಆಚರಣೆ ರೀತಿಯಾಗುತ್ತದೆ. ಕಾಲಕ್ರಮೇಣ ಅವು ಸಾಮೂಹಿಕ

ಕ್ರಿಯೆಗಳಾಗಿ ಸಂಪ್ರದಾಯದ ಸ್ಥಾನವನ್ನು ಪಡೆದುಕೊಳ್ಳುತ್ತವೆ. ಸಮಾಜವನ್ನು ನಿಯಂತ್ರಿಸುವ ಮತ್ತು ಅದನ್ನು ಸರಿಯಾಗಿ ಕೊಂಡೊಯ್ಯುವ ಶಕ್ತಿ ಸಂಪ್ರದಾಯಕ್ಕಿದೆ.

'ನಂಬಿಕೆ' ಎಂದರೆ ಒಂದು ಹೇಳಿಕೆ ಅಥವಾ ವಸ್ತುಸ್ಥಿತಿಯ ಬಗ್ಗೆ ಮಾನಸಿಕ ಒಪ್ಪಿಗೆಯನ್ನು ತೋರುವ ಪ್ರವೃತ್ತಿ. ಇಂತಹ ನಂಬಿಕೆಗಳು ಆದಿವಾಸಿಗಳಲ್ಲಿ ಮಾತ್ರವಲ್ಲದೆ ನಾಗರಿಕತೆಯ ಆವರಣದಲ್ಲಿ ವಾಸಿಸುವವರಲ್ಲಿಯೂ ಕಂಡುಬರುತ್ತವೆ. 'ಹಸುವಿನ ಸೆಗಣಿಯನ್ನು ಕಲಸಿ ಗಾಯಕ್ಕೆ ಮೆತ್ತಿದರೆ ಗಾಯ ವಾಸಿಯಾಗುತ್ತದೆ' 'ಬೆಕ್ಕಿನ ಹಸಿ ಮಾಂಸವನ್ನು ತಿಂದರೆ ರೋಗ ಗುಣಮುಖವಾಗುತ್ತದೆ' 'ಪ್ರಯಾಣ ಹೊರಟಾಗ ಒಂದು ಸೀನು ಬಂದರೆ ಸುಖಕರ; ಎರಡು ಸೀನು ಬಂದರೆ ಅಹಿತಕರ' 'ಬಲಮಗ್ಗುಲಲ್ಲಿ ಮಲಗಿದರೆ ಆಯುಷ್ಯ ಹೆಚ್ಚಾಗುತ್ತದೆ' 'ಒಲೆಯನ್ನು ಕಾಲಿನಿಂದ ಒದೆಯಬಾರದು' 'ಗಂಗಾದಿ ಸ್ನಾನ ಪವಿತ್ರ' 'ಧೂಮಕೇತು ಕಾಣಿಸಿಕೊಂಡರೆ ಪ್ರಸಿದ್ಧ ಪುರುಷರು ಸಾವಿಗೀಡಾಗುತ್ತಾರೆ' ಇನ್ನೂ ಮುಂತಾದ ಜಾತಿ, ವೃತ್ತಿ, ಅಂತಸ್ತುಗಳ ಭೇದವಿಲ್ಲದೆ ಪ್ರಸ್ತುತ ಜನಪದರಲ್ಲಿ ಇರುವ ನಂಬಿಕೆಗಳು. ಒಟ್ಟಿನಲ್ಲಿ ಭಯ ಮತ್ತು ಭಾವಾತ್ಮಕತೆಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ನಂಬಿಕೆಗಳು ಬೆಳೆದುಬಂದಿವೆ. ವರ್ಜಿಲ್ ಹೇಳುವಂತೆ "ಮೂಢನಂಬಿಕೆ ಒಂದು ಆಧಾರರಹಿತ ಪದ್ಧತಿ ಅಥವಾ ನಂಬಿಕೆ. ಸಮಾಜದಲ್ಲಿನ ವ್ಯಕ್ತಿಯನ್ನು ಅದು ಒಪ್ಪುವಂತೆ ಮಾಡುತ್ತದೆ. ಮಾಂತ್ರಿಕ ವಿಷಯ ಹಾಗೂ ಅಗೋಚರ ಶಕ್ತಿಗಳಲ್ಲಿ ನಂಬಿಕೆ ಇಡುವಂತೆ ಮಾಡುವುದಲ್ಲದೆ ಜನರನ್ನು ಸತತ ಭಯಭೀತರನ್ನಾಗಿ ಮಾಡುವ ಶಕ್ತಿ ಮೂಢನಂಬಿಕೆಗಳಿಗಿದೆ"[2] ಕೆಲವು ನಂಬಿಕೆಗಳಲ್ಲಿ ವೈಜ್ಞಾನಿಕ ಸತ್ಯ, ಸಾಮಾನ್ಯಜ್ಞಾನ, ಪೌರಾಣಿಕ, ಐತಿಹಾಸಿಕ ಅಂಶಗಳು ಅಡಕವಾಗಿರುತ್ತವೆ.

ಆಚರಣೆ ಎಂದರೆ ನಾವು ಅನುಸರಿಸುವ ಕ್ರಮ ಅಥವಾ ನಂಬಿಕೆಗಳ ಅನುಷ್ಠಾನ ರೂಪ, ವಿಧಾನ ಅಥವಾ ಪದ್ಧತಿ. ಒಂದು ಕೆಲಸವನ್ನು ನಿರ್ದಿಷ್ಟ ರೀತಿಯಲ್ಲಿ ಮಾಡುವ ವಿಧಾನ. ಹಬ್ಬವನ್ನು ಆಚರಿಸುವ ವಿಧಾನ, ಪೂಜೆ ಮಾಡುವ ಕ್ರಮ, ಮದುವೆಯಲ್ಲಿ ನಡೆಯುವ ವಿಧಿವಿಧಾನಗಳು ಆಚರಣೆಗಳಾಗುತ್ತವೆ. ಆಚರಣೆಗಳು ಸಂಪ್ರದಾಯದ ಒಳಗೆ ಬರುತ್ತವೆ. ನೆಲಮೂಲ ಸಂಸ್ಕೃತಿಯ ಆಚರಣೆಗಳು ಪರಿಸರದೊಂದಿಗೆ ಅವಿನಾಭಾವ ಸಂಬಂಧ ಹೊಂದಿವೆ. ಕೃಷಿ ಆಧಾರಿತ ಸಮುದಾಯದಲ್ಲಿ ಎಲ್ಲಾ ಹಬ್ಬಗಳು ಬೆಳೆಗಳಿಗೆ ಸಂಬಂಧಿಸಿದವುಗಳಾಗಿವೆ. ಅದರೊಂದಿಗೆ ಪ್ರಕೃತಿಗೆ ಕೃತಜ್ಞತೆ ಸಲ್ಲಿಸಲು ಆಚರಿಸಲಾಗುತ್ತದೆ. ಒಟ್ಟಾರೆಯಾಗಿ ಸಂಪ್ರದಾಯ, ನಂಬಿಕೆ, ಆಚರಣೆಗಳು ಕೇವಲ ಆಚರಣೆಗಳಷ್ಟೇ ಅಲ್ಲ; ಸಮಾಜದ ಗುರುತು, ಮೌಲ್ಯ ಮತ್ತು ಒಗ್ಗಟ್ಟಿನ ಪ್ರತಿಬಿಂಬಗಳಾಗಿವೆ. ಎಸ್.ಜಿ. ಸಿದ್ಧರಾಮಯ್ಯನವರ ಸಾಹಿತ್ಯದಲ್ಲಿ ಸಂಪ್ರದಾಯ, ನಂಬಿಕೆಗಳು ಕೇವಲ ಆಚರಣೆಯಾಗಿ ಮಾತ್ರ ಕಾಣಿಸುವುದಿಲ್ಲ; ಅವು ಗ್ರಾಮೀಣ ಜನರ ಜೀವನಶೈಲಿ, ಮೌಲ್ಯ ಹಾಗೂ ಸಂಬಂಧಗಳ ಪ್ರತೀಕಗಳಾಗಿ ವ್ಯಕ್ತವಾಗಿವೆ. ಇವರು ಹಬ್ಬ–ಹರಿದಿನ, ಜಾತ್ರೆಗಳ ಮೂಲಕ ಗ್ರಾಮೀಣ ಸಂಸ್ಕೃತಿಯ ವೈಶಿಷ್ಟ್ಯವನ್ನು ಚಿತ್ರಿಸಿದ್ದಾರೆ. ಜನರ ದೈನಂದಿನ ಬದುಕಿನಲ್ಲಿ ಸಂಪ್ರದಾಯಗಳು ಹೇಗೆ ಬೆರೆತುಹೋಗಿವೆ ಎಂಬುದನ್ನು ಅವರ ಕವಿತೆಗಳು

ಸ್ಪಷ್ಟಪಡಿಸುತ್ತವೆ. ಪಾಪ–ಪುಣ್ಯ, ದೇವರು, ವಿಧಿ, ಶಕುನ–ಅಪಶಕುನ ಮುಂತಾದ ನಂಬಿಕೆಗಳು ಗ್ರಾಮೀಣ ಜನರ ಮೇಲೆ ಹೇಗೆ ಪ್ರಭಾವಿಸಿವೆ ಎನ್ನುವುದನ್ನು ಸೂಕ್ಷ್ಮವಾಗಿ ನಿರೂಪಿಸಿದ್ದಾರೆ. ಮೂಢನಂಬಿಕೆಗಳನ್ನು ಕಠೋರವಾಗಿ ವಿರೋಧಿಸಿರುವ ಇವರು ಅದರಿಂದುಂಟಾಗುವ ಸಮಸ್ಯೆಗಳನ್ನು ವಿಮರ್ಶಾತ್ಮಕವಾಗಿ ಚರ್ಚಿಸಿದ್ದಾರೆ. ಸಂಪ್ರದಾಯ ಮತ್ತು ಆಧುನಿಕತೆಯ ನಡುವಿನ ಸಂಘರ್ಷವನ್ನು ವೈಜ್ಞಾನಿಕವಾಗಿ ಚಿತ್ರಿಸಿದ್ದಾರೆ. ಬದಲಾಗುತ್ತಿರುವ ಮೌಲ್ಯಗಳ ನಡುವೆ ಹಳೆಯ ಸಂಪ್ರದಾಯಗಳು ಹೇಗೆ ಉಳಿದುಕೊಂಡಿವೆ ಮತ್ತು ಹೊಸ ಚಿಂತನೆಗಳು ಹೇಗೆ ಬೆಳೆಯುತ್ತಿವೆ ಎನ್ನುವುದನ್ನು ಕಾವ್ಯಗಳಲ್ಲಿ ತೆರೆದಿಡುತ್ತಾರೆ.

**“ಗೆದ್ದಲು ಕಟ್ಟಿದ ಮನೆಗೆ ಹಾವು ಹರಿದಂತೆ**
**ಹಾರುವನ ಬರವು ಕುಕ್ಕೆ ಗುಡಿಗೆ**
**ತಿರುಗಿ ಬಿದ್ದವನಿಗೆ ಡಿಂಡಿರುಳು ಹೊಡೆತ**
**ತೊಂಬುಲದ ಅಭಿಷೇಕ**
**ಕಟ್ಟಿದವ ಹೊರಗಾದ ಹೊರಗಿನವ ಒಳಗಾದ”**[3]

ಎಸ್.ಜಿ. ಸಿದ್ದರಾಮಯ್ಯನವರು ‘ಮಡೆ ಸ್ನಾನದಲ್ಲಿ ಭಾಷೆಗೂಳಿನ ಭಟರೂ’ ಕವಿತೆಯಲ್ಲಿ ದೇವಸ್ಥಾನಗಳಲ್ಲಿ ಮೂಢನಂಬಿಕೆಯಾಗಿ ಆಚರಣೆಯಲ್ಲಿದ್ದ ‘ಮಡೆ ಸ್ನಾನ’ದ ಬಗ್ಗೆ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದ್ದಾರೆ. ನೆಲಮೂಲ ಸಾಂಪ್ರದಾಯಿಕ ಧಾರ್ಮಿಕ ಆಚರಣೆಗಳಲ್ಲೊಂದಾದ ‘ಮಡೇ ಸ್ನಾನ’ ದೇವರಿಗೆ ಸಲ್ಲಿಸುವ ಭಕ್ತಿ ಮತ್ತು ನಂಬಿಕೆಯನ್ನು ಸೂಚಿಸುತ್ತದೆ. ಭಕ್ತರು ದೇವರಿಗೆ ನೈವೇದ್ಯವಾಗಿ ಅರ್ಪಿಸಿದ್ದ ಎಡೆಯನ್ನು ಬ್ರಾಹ್ಮಣರು ಅಥವಾ ಪೂಜಾರಿಗಳು ಸೇವಿಸಿದ ನಂತರ ಉಳಿದ ಎಲೆಗಳ ಮೇಲೆ ಭಕ್ತರು ಉರುಳಾಡುತ್ತಾರೆ. ಇದನ್ನು ‘ಪವಿತ್ರ ಪ್ರಸಾದದ ಸ್ಪರ್ಶ’ ಎಂದು ಕರೆಯಲಾಗುತ್ತದೆ. ಇದರಿಂದ ಚರ್ಮರೋಗ ನಿವಾರಣೆಯಾಗುತ್ತದೆ, ದುಷ್ಟಶಕ್ತಿಗಳ ಪ್ರಭಾವ ಕಡಿಮೆಯಾಗುತ್ತದೆ, ದೇಹ ಶುದ್ಧೀಕರಣವಾಗುತ್ತದೆ ಮತ್ತು ದೇವರ ಕೃಪೆ ದೊರೆಯುತ್ತದೆ ಎಂಬ ಬಲವಾದ ನಂಬಿಕೆಯಿದೆ. ಸಾಮಾಜಿಕ ಅಸಮಾನತೆಯ ಪ್ರತಿಬಿಂಬದಂತಿರುವ ಈ ಪದ್ಧತಿಯನ್ನು ಎಸ್.ಜಿ. ಸಿದ್ದರಾಮಯ್ಯನವರು ಇದನ್ನು ಅತ್ಯಂತ ಕನಿಷ್ಠ ಮೂಢ ನಂಬಿಕೆ ಎಂದಿದ್ದಾರೆ. ಜನಜೀವನದ ಸರಳ ಹಾಗೂ ಭಾವನಾತ್ಮಕ ಚಿತ್ರಣಗಳ ಮೂಲಕ, ತಾತ್ವಿಕ, ವೈಜ್ಞಾನಿಕ ಮತ್ತು ವೈಚಾರಿಕ ನೆಲೆಗಟ್ಟಿನಲ್ಲಿ ಕಟುವಾಗಿ ವಿರೋಧಿಸುತ್ತಾರೆ. ದಾರಿದ್ರ್ಯ, ಅಜ್ಞಾನ, ಶೋಷಣೆಯ ಸಂಕೇತವಾಗಿ ಇದು ನಂಬಿಕೆಯಲ್ಲಿದೆ ಎಂದಿದ್ದಾರೆ. ಮನು ಸೃಷ್ಟಿಸಿದ ವೈದಿಕ ಸಂಸ್ಕೃತಿಯ ಆರಾಧಕರಾದ ಹಾರುವವರ ಈ ಪದ್ಧತಿಯನ್ನು ಜೀವ ವಿರೋಧದ ನೆಲೆಯಲ್ಲಿ ಟೀಕಿಸಿದ್ದಾರೆ. ದೇವರು ಶುದ್ಧನಾದರೆ ಈ ರೀತಿಯ ಆಚರಣೆಗಳು ಏಕೆ ಬೇಕು? ಎಲ್ಲರೂ ದೇವರ ಮಕ್ಕಳಾದರೆ ಈ ಭೇದ ಏಕೆ? ಎಂಬ ತಾತ್ವಿಕ ಪ್ರಶ್ನೆಗಳನ್ನು ಎತ್ತಿದ್ದಾರೆ.

**“ಬ್ರಾಹ್ಮಣರು ಕುಂತುಂಡ ಎಂಜಲೆಲೆಗಳ ಮೇಲೆ**
**ಶೂದ್ರಜನ ಉರುಳಾಡಿದರೆ ಶ್ರೇಯವಂತೆ**

**ಭೂಸುರೋಪಾಸನೆಯ ಮಡೆಸ್ನಾನವಂತೆ"[4]**

ಬ್ರಾಹ್ಮಣರು ಕುಂತುಂಡ ಎಂಜಲೆಲೆಗಳ ಮೇಲೆ ಶೂದ್ರರು ಉರುಳಾಡಿದರೆ ರೋಗ ಗುಣಮುಖವಾಗುತ್ತದೆ ಎಂಬ ಮೌಢ್ಯಾಚರಣೆಯನ್ನು ಕಾಪಾಡಿಕೊಂಡು ಬರುತ್ತಿರುವ ಮನು ಸಂಸ್ಕೃತಿಯನ್ನೇ ಆಹ್ವಾನಿಸಿಕೊಂಡ ಬ್ರಾಹ್ಮಣರಿಗೆ ಶೂದ್ರ ಕುಂತುಂಡ ಎಂಜಲೆಲೆಗಳ ಮೇಲೆ ಬ್ರಾಹ್ಮಣರು ಉರುಳಾಡಿದರೆ ರೋಗ ಗುಣಮುಖವಾಗಬಾರದೇಕೆ? ಎಂಬ ಪ್ರಶ್ನೆಯನ್ನು ಒಡ್ಡುತ್ತಾರೆ. ಶೂದ್ರರನ್ನು ಕೀಳಾಗಿಸುವ ಹಾಗೂ ಹಿಡಿತದಲ್ಲಿಟ್ಟುಕೊಳ್ಳುವ ಅಧಿಕಾರಕೇಂದ್ರಿತ ಮೇಲ್ವರ್ಗದ ಅರ್ಥಹೀನ ಪದ್ಧತಿಯನ್ನು ಕವಿ ವಿರೋಧಿಸಿದ್ದಾರೆ. ಎಂಜಲೆಲೆಗಳ ಮೇಲೆ ಹೊರಳಾಡಿ ಗುಣಮುಖವಾಗುವುದಾದರೆ ಪ್ರಸ್ತುತ ವೈದ್ಯಕೀಯ ಕ್ಷೇತ್ರದಲ್ಲಿರುವ ವೈದ್ಯರೇಕೆ? ಬಡವರಿಗೆ ಗಗನ ಕುಸುಮದಂತಿರುವ, ಹಣವಂತರಿಗೆ ಮತ್ತು ರಾಜಕಾರಣಿಗಳಿಗೆ ಕೈಯಲ್ಲಿರುವ ವೈದ್ಯಕೀಯ ವಿದ್ಯೆ ಏಕೆ? ಎಂದು ವೈಚಾರಿಕ ನೆಲೆಯಲ್ಲಿ ಪ್ರಶ್ನಿಸಿದ್ದಾರೆ. ಅಸಮಾನತೆಯನ್ನು ಪರೋಕ್ಷವಾಗಿ ಬಿಂಬಿಸುವ ಅಂತಹ ಕನಿಷ್ಠ ಮೂಢನಂಬಿಕೆಗಳನ್ನು ವಿರೋಧಿಸುತ್ತಾರೆ.

**"ನಾನೆಲ್ಲಿಗಾದರೂ ಪಯಣ ಹೊರಟರೆ**
**ಮನದಾಳದಲ್ಲಿ ಹಿಂದಿರುಗುವುದಿಲ್ಲ ಭಾವ ಕಾಡುತ್ತಿತ್ತು**
**ಹೇಳಿದೆ ನನ್ನವಳಿಗೆ ಸಾವಿರದ ಬಿಡ್ತು ಹೇಳಿ ಅತ್ತಳು**
**ಹೊರಟ ದಿನ ಹಲ್ಲಿ ಲೊಚ ಲೊಚಕೆಲ್ಲ ಕೃಷ್ಣ ಕೃಷ್ಣ"[5]**

'ಸಾವು' ಎಂಬ ಕವಿತೆ ಎಸ್.ಜಿ. ಸಿದ್ದರಾಮಯ್ಯನವರ ಅನೇಕ ನಂಬಿಕೆ ಮತ್ತು ಮೂಢ ನಂಬಿಕೆಗಳ ಮನದಾಳದ ನೆನಪುಗಳ ಅಭಿವ್ಯಕ್ತಿಯಾಗಿದೆ. ಇವರ ಜೀವನದಲ್ಲಿ ಕೆಲವು ಮೂಢನಂಬಿಕೆಗಳು ಗಾಢವಾದ ಪ್ರಭಾವ ಬೀರಿರುವುದನ್ನು ಕಾಣುತ್ತೇವೆ. ಇವು ಅವರ ಯೋಚನೆ, ನಿರ್ಧಾರ ಮತ್ತು ದಿನನಿತ್ಯದ ಜೀವನವನ್ನೇ ನಿಯಂತ್ರಿಸಿರುವುದು ಸ್ಪಷ್ಟ. ಅಲ್ಪ ಘಟನೆಗಳೂ ಅಪಶಕುನ ಎನ್ನುವ ರೀತಿ ಅವರದ್ದಾಗಿತ್ತು. ಅವರಿಗೆ ಎಲ್ಲಿಗಾದರೂ ಪ್ರಯಾಣ ಹೊರಟರೆ ಅಲ್ಲೇ ಏನೋ ಆಗಿಬಿಡುತ್ತೇನೆ, ಏನೋ ಆಗಿಬಿಡುತ್ತದೆ ಎಂದು ಮನದಾಳದಲ್ಲಿ ಹಿಂದಿರುಗದಿರುವ ಭಾವ ಕಾಡುತ್ತಿತ್ತಂತೆ. ಈ ವಿಷಯವನ್ನು ಅವರ ಹೆಂಡತಿ ಶ್ರೀಮತಿ ಪ್ರೇಮಲೀಲಾರವರಲ್ಲಿ ಹೇಳಿದಾಗ ಪ್ರೇಮಲೀಲಾರವರು "ಸಾವಿರದ (ಸಾವು ಇರದ/ ಒಂದು ಸಾವಿರ) ಬಿಡ್ತು ಹೇಳಿ. ಹಾಗೆ ಅಂದುಕೊಳ್ಳಬಾರದು" ಎಂದು ಹೇಳುತ್ತಿದ್ದರಂತೆ. ಕವಿಯ ಮಾತಿನಲ್ಲಿಯೇ ಹೇಳುವುದಾದರೆ "ಅವಳು ಹಲ್ಲಿ ಲೊಚ ಲೊಚಗುಟ್ಟಿದರೆ ಶಿವ ಶಿವ, ಕೃಷ್ಣ ಕೃಷ್ಣ ಎನ್ನುತ್ತಿದ್ದಳು. ಕಾಗೆ ಕೂಗಿದರೆ ಅವುಗಳನ್ನು ಶಪಿಸುತ್ತಿದ್ದಳು. ಮನೆ ಬಿಟ್ಟ ನಂತರ ಅವಳು ಸ್ನಾನ ಮಾಡುವುದಾಗಲಿ ಕಸಗುಡಿಸುವುದಾಗಲಿ ನಿಷಿದ್ಧ. ಈಗ ಎಲ್ಲಿಗಾದರೂ ಹೊರಟರೆ ಸ್ವರ್ಗಸ್ಥಳಾದ ನನ್ನ ಅಜ್ಜಿ ಕಂಡೇ ಕಾಣುತ್ತಾಳೆ. ಮೊದಲಿದ್ದ ಆ ಯೋಚನೆಗಳು ಈಗಿಲ್ಲ. ಮರುದಿನ ಎಲ್ಲಿಗಾದರೂ ಹೊರಟರೆ ಆ ದಿನ ರಾತ್ರಿ ಕನಸಿನಲ್ಲಿ ನನ್ನ ಅಜ್ಜಿ ಕಾಣಿಸಿಕೊಂಡು ಆಶೀರ್ವಾದ ಮಾಡುತ್ತಾಳೆ. ಅವಳ ಬೆಳದಿಂಗಳ ನಗು ನನಗೆ ಕಂಡೇ ಕಾಣುತ್ತದೆ. ಆದರೆ ಈ ವಿಷಯವನ್ನು ನಾನು ನನ್ನ ಹೆಂಡತಿಗೆ ಹೇಳಿಲ್ಲ. ಅಜ್ಜಿ ತೊಡೆಯಲ್ಲಿ ತಲೆಯಿಟ್ಟು ಮಲಗಿದ್ದ ನೆನಪು, ನನ್ನನ್ನು ತಟ್ಟಿದ್ದ, ನನಗೆ

ಉಣ್ಣಿಸಿದ್ದ ಅವಳ ಕೈ ಎಲ್ಲಾ ನನಗೆ ನೆನಪಾಗುತ್ತದೆ. ಈ ನಂಬಿಕೆಗಳಿಗೆ ವ್ಯಾಖ್ಯಾನ ಕೊಡುವುದಕ್ಕೆ ಸಾಧ್ಯವಿಲ್ಲ. ಇವು ಸುಪ್ತಪ್ರಜ್ಞೆಯೊಳಗೆ ಸಿಕ್ಸ್‌ಸೆನ್ಸ್ ಆಗಿ ನನ್ನೊಳಗೆ ಕಾಡುವ ಸಂಗತಿಗಳು'' ಎನ್ನುವುದು ಅವರ ಮನದಾಳದ ನುಡಿ. ಇಡೀ ದೇಸಿ ಬದುಕಿನ ನಂಬಿಕೆಗಳನ್ನು ತಿರಸ್ಕರಿಸಿ ತಿರಸ್ಕರಿಸದಿರುವ, ಒಪ್ಪಿಯೂ ಒಪ್ಪದಿರುವ ಸಂದಿಗ್ಧ ಮನಸ್ಸಿನ ತೊಳಲಾಟದ ಒಂದು ಚಿತ್ರಣ ಈ ಕವನದಲ್ಲಿ ವ್ಯಕ್ತವಾಗಿದೆ.

**``ಜ್ಯೋತಿಷಿ ಬರೆದಿದ್ದಾನೆ ಜಾತಕದಲ್ಲಿ**
**ಕುಜದೋಷದಿಂದ ಮೃತ್ಯುಭಯವೆಂದು**
**ಮೃತ್ಯುಂಜಯ ಜಪದಿಂದ ಶತಾಯುಷ್ಯ**
**ದ ಅಭಯ ನೀಡಿದ್ದಾನೆ''[6]**

ತಮ್ಮ ಹುಟ್ಟು ದಿನವನ್ನೇ ತಿಳಿಯದ ಎಸ್.ಜಿ. ಸಿದ್ದರಾಮಯ್ಯನವರು ಶಾಲೆಯಲ್ಲಿ ಶಿಕ್ಷಕರು ದಾಖಲು ಮಾಡಿದ್ದ ದಿನವನ್ನೇ ಹುಟ್ಟು ದಿನವೆಂದು ನಂಬಿಕೊಂಡಿದ್ದಾರೆ. ಇವರು ತಮ್ಮ ಹುಟ್ಟಿದ ದಿನಾಂಕಕ್ಕಿಂತ ಜೀವನಕ್ಕೆ ಪ್ರಾಮುಖ್ಯತೆ ಕೊಟ್ಟವರು. ``ನನಗೆ ಹುಟ್ಟಿದ ದಿನ ತಿಳಿಯದು. ನಾನು ಬಡತನದಲ್ಲಿ ಹುಟ್ಟಿ, ದುಡಿತದಲ್ಲಿ ಬೆಳೆದದ್ದು'' ಎನ್ನುವುದು ಅವರ ಸ್ಪಷ್ಟ ಮಾತು. ಹುಟ್ಟಿದ ದಿನಾಂಕಕ್ಕಿಂತ ಅವರ ಬದುಕಿನ ಅನುಭವಗಳಿಗೆ, ನಡೆದ ಘಟನೆಗಳಿಗೆ ಪ್ರಾಧಾನ್ಯತೆ ನೀಡಿದವರು. ``ನನ್ನನ್ನು ಶಾಲೆಗೆ ಸೇರಿಸಿದ್ದು ನಿರ್ದಿಷ್ಟವಾಗಿ ಎಂದು ಎಂಬುದು ನನಗೆ ನೆನಪಿಲ್ಲ. ನನ್ನ ಹುಟ್ಟಿದ ದಿನಾಂಕ :19-11-1946 ಎಂದಿದ್ದರೂ ಇದು ನನ್ನಪ್ಪ ನಿಖರವಾಗಿ ಗುರುತಿಟ್ಟ ದಿನಾಂಕವಂತೂ ಖಂಡಿತ ಅಲ್ಲ. ಬಹುಪಾಲು ನನ್ನನ್ನು ಸ್ಕೂಲಿಗೆ ಸೇರಿಸಿದ ದಿವಸ, ಸೇರಿಸಿಕೊಂಡ ಮೇಷ್ಟ್ರು ಹಿರಿಯಣ್ಣಯ್ಯನವರು ನನ್ನ ಹುಟ್ಟಿದ ದಿನಾಂಕವನ್ನು ನಿಗದಿಮಾಡಿದ ದಿನಾಂಕವೇ ನನ್ನ ಇಂದಿನ ಡೇಟ್ ಆಫ್ ಬರ್ತ್ ಎಂದು ನಂಬಿಕೊಂಡಿರುವ ನನ್ನ ಜನ್ಮ ದಿನಾಂಕ''[7] ಎನ್ನುವುದು ಕವಿ ಎಸ್.ಜಿ. ಸಿದ್ಧರಾಮಯ್ಯನವರ ಅಭಿಪ್ರಾಯ. ಇದು ಕುಜ ದೋಷವನ್ನು ನೋಡಿ ವೈವಾಹಿಕ ಸಂಬಂಧವನ್ನು ಕುದುರಿಸುವ ಪುರೋಹಿತರ ನಂಬಿಕೆಯನ್ನು ಬುಡಮೇಲು ಮಾಡಿದಂತಿದೆ. ವೈಜ್ಞಾನಿಕ ದೃಷ್ಟಿಯಿಂದ ಯಾವುದೇ ಆಧಾರಗಳಿಲ್ಲದಿದ್ದರೂ ಕುಜ ದೋಷದಿಂದ ವೈವಾಹಿಕ ಸಂಬಂಧಗಳು ದೂರವಾಗುತ್ತವೆ, ದಾಂಪತ್ಯ ಜೀವನದಲ್ಲಿ ಕಲಹ, ಅಸ್ಥಿರತೆ, ಅಸಮಾಧಾನ ಉಂಟಾಗುತ್ತವೆ ಎಂದು ಹೇಳಿ ಅದರ ಪರಿಹಾರವೆಂದು ಪೂಜೆ, ಹೋಮ-ಹವನಗಳು, ಕದಳಿ ಮದುವೆ, ಕುಂಭ ವಿವಾಹಗಳನ್ನು ಮಾಡಲು ಹೇಳುವ ಜ್ಯೋತಿಷಿಗಳನ್ನು ವೈಚಾರಿಕ, ವೈಜ್ಞಾನಿಕ ಮತ್ತು ತಾರ್ಕಿಕ ದೃಷ್ಟಿಕೋನಗಳಿಂದ ವಿರೋಧಿಸುತ್ತಾರೆ.

**``ಊರಾಚೆಯ ಅರಳಿಯಡಿ ನರಳಿ ನೆನಪುಯಲಗಳ್ಳಿ**
**ದೀವಟಿಗೆಯ ದೇವಗನ್ನೆ ಧರುಮನೂರಿನೊಕ್ಕಲು**
**ಹೊಲಮಾಳದ ಹಾಳಿನಲ್ಲಿ ಬೆಳುದಿಂಗಳ ಹಳಸಿನಲ್ಲಿ**
**ಊಳಿಟ್ಟಿದೆ ಊರ ಜೀವ ಕಳ್ಳುಬಳ್ಳಿ ಜಾತ್ರೆಗೆ''[8]**

ಜಾತ್ರೆಯ ರೀತಿಯನ್ನು ಕಟ್ಟಿ ಕೊಡುವ ಕವಿತೆ 'ಜಾತ್ರೆಗೆ'. ಊರ ಜಾತ್ರೆಗಳನ್ನು

ಮಾಡದಿದ್ದರೆ ದೇವರುಗಳು ಮಳೆ, ಬೆಳೆ, ಕೊಡುವುದಿಲ್ಲ. ಸಮೃದ್ಧತೆ ಎಲ್ಲಾ ಸರ್ವನಾಶವಾಗುತ್ತದೆ. ರೋಗ ರುಜಿನಗಳನ್ನು ತರುತ್ತಾರೆ. ಜಾನುವಾರುಗಳಿಗೆ ತೊಂದರೆ ಕೊಡುತ್ತಾರೆ. ಎನ್ನುವ ನಂಬಿಕೆ ಇಟ್ಟುಕೊಂಡ ಜನರಿಗೆ ಜಾತ್ರೆಗಳು ಮೂಢನಂಬಿಕೆಗಳಲ್ಲ; ಜೀವನ ಸಂಭ್ರಮದ ಸಮೃದ್ಧಿಯ ಆಚರಣೆಗಳು. ಜಾತ್ರೆಗಳು ನೆಲಮೂಲ ಸಂಸ್ಕೃತಿಯ ಜೀವಂತ ಪ್ರತಿರೂಪಗಳು. ಇವು ಕೇವಲ ಧಾರ್ಮಿಕ ಕಾರ್ಯಕ್ರಮಗಳಲ್ಲ; ಸಾಂಸ್ಕೃತಿಕ, ಸಾಮಾಜಿಕ, ಮತ್ತು ಆರ್ಥಿಕ ಚಟುವಟಿಕೆಗಳ ಸಂಕಲನಗಳಾಗುವುದರೊಂದಿಗೆ ಸಂಬಂಧಗಳನ್ನು ಬೆಸೆಯುವ ಆಚರಣೆಗಳಾಗಿವೆ. ಎಂಬ ಸಂದೇಶವನ್ನು ಕವಿ ಸಾರುತ್ತಾರೆ. ಇವರು ಕೆಲ ಸಂಪ್ರದಾಯಗಳಾದ ಜಾತ್ರೆ, ಹಬ್ಬ, ಹರಿದಿನಗಳನ್ನು ಗೌರವದಿಂದ ಕಾಣುತ್ತಾರೆ. ಆದರೆ ಅಂಧ, ಮೂಢ ನಂಬಿಕೆಗಳನ್ನು ಸೂಕ್ಷ್ಮವಾಗಿ ಪ್ರಶ್ನಿಸುತ್ತಾರೆ. ಎಸ್.ಜಿ. ಸಿದ್ದರಾಮಯ್ಯನವರ ಊರಾದ ಸಿಗಾಪುರದ ಎಲ್ಲಾ ದೇವರುಗಳು ಈ ಕವಿತೆಯಲ್ಲಿ ಬರುತ್ತಾರೆ. ಸುತ್ತಮುತ್ತಲಿನ ಊರಿನ ದೇವರುಗಳನ್ನು ಬರಮಾಡಿಕೊಂಡು ಜಾತ್ರೆಯನ್ನು ಆಚರಿಸುವ ಪ್ರಕ್ರಿಯೆ ಅಭಿವ್ಯಕ್ತಗೊಂಡಿದೆ. ನಿಂತು ಹೋದ ಜಾತ್ರೆಯನ್ನು ಮತ್ತೆ ಆರಂಭಿಸುವ ಕರೆಯನ್ನು ಕೊಟ್ಟ ರೀತಿಯಲ್ಲಿ ಕವಿತೆ ರಚನೆಗೊಂಡಿದೆ.

**“ಕನಸೆಂದರೆ ಅದು । ಕಾಡುವ ಕೂಸಿನಂತೆ**
**ಕಳೆದ ದಿನದಂತೆ । ಉಕ್ಕುವ ನೆನಪುಗಳ ಬಿಕ್ಕಳಿಕೆ**
**ಸತ್ತವರು ಸುಳಿದಾಡಿದರೆ । ಸಾವು ಹತ್ತಿರ ಬಂದಂತೆ**
**ಸುಳಿದಾಡಿದವರು ಮಾತಾಡಿದರೆ । ಬಂದದ್ದು ಕೈಬೀಸಿ ಕರೆದಂತೆ”**[9]

ನೆಲಮೂಲ ಸಂಸ್ಕೃತಿಯಲ್ಲಿ ಅನೇಕ ಜನರು ಕನಸುಗಳನ್ನು ಕೇವಲ ಮನಸ್ಸಿನ ಕ್ರಿಯೆ ಎಂದು ನಂಬುವುದಿಲ್ಲ. ಅವುಗಳನ್ನು ಶಕುನ, ಕ್ರಿಯೆಯ ಸೂಚನೆ, ಮತ್ತು ಭವಿಷ್ಯದ ಸಂಕೇತ ಎಂದು ಪರಿಗಣಿಸುತ್ತಾರೆ. ಕನಸಿನಲ್ಲಿ ನೀರು, ನದಿ, ಸಮುದ್ರಗಳು ಕಂಡರೆ ಶಾಂತಿ, ನೆಮ್ಮದಿಯ ಸಂಕೇತ, ಹೂಗಳು ಪ್ರೀತಿಯ ಸಂಕೇತ, ದೇವರು ದೇವಾಲಯಗಳು ಶುಭದ ಸಂಕೇತ, ಬೆಳಕು ಮತ್ತು ಸೂರ್ಯೋದಯ ಹೊಸ ಉದಯದ ಸಂಕೇತ, ಹಣ್ಣುಗಳು ಆರೋಗ್ಯ ಮತ್ತು ಸಮೃದ್ಧಿಯ ಸಂಕೇತ, ಚಿನ್ನ ಆಭರಣ ಆರ್ಥಿಕತೆಯ ಏಳಿಗೆಯ ಸಂಕೇತ ಇತ್ಯಾದಿ ಈ ಎಲ್ಲಾ ಕನಸುಗಳು ಸಾಮಾನ್ಯವಾಗಿ ಭವಿಷ್ಯದಲ್ಲಿ ಒಳ್ಳೆಯ ಘಟನೆಗಳು, ಅವಕಾಶಗಳು, ಶಾಂತಿ ಮತ್ತು ನೆಮ್ಮದಿಯ ಸೂಚಕವೆಂದು ನಂಬಲಾದ ಕನಸುಗಳಾಗಿವೆ. ಎತ್ತರದಿಂದ ಬೀಳುವುದು, ಹಲ್ಲುಗಳು ಉದುರುವುದು, ಹೆಣ ಕಾಣುವುದು, ಸತ್ತವರು ಬರುವುದು, ಹಾವು ಕಚ್ಚುವುದು ಇತ್ಯಾದಿಗಳನ್ನು ಅಶುಭ ಸೂಚಕ ಕನಸುಗಳೆಂದು ನಂಬಲಾಗಿದೆ. ಇವು ವ್ಯಕ್ತಿಗಳಲ್ಲಿ ಸಾಮಾನ್ಯವಾಗಿ ಭಯ, ಆತಂಕವನ್ನು ಸೃಷ್ಟಿಸುತ್ತವೆ. ಕನಸುಗಳ ಬಗ್ಗೆ ಇರುವ ನಂಬಿಕೆಗಳನ್ನು ಎಸ್.ಜಿ. ಸಿದ್ದರಾಮಯ್ಯನವರು ತಾರ್ಕಿಕವಾಗಿ, ವೈಜ್ಞಾನಿಕ ದೃಷ್ಟಿಕೋನದಿಂದ ವಿರೋಧಿಸುತ್ತಾರೆ. ಇವು ದಿನನಿತ್ಯದ ಅನುಭವ, ಕಳೆದುಹೋದ ಉಕ್ಕುವ ನೆನಪುಗಳ ಬಿಕ್ಕಳಿಕೆ ಎನ್ನುವುದು ಇವರ ಅಭಿಪ್ರಾಯವಾಗಿದೆ.

ಸಂಪ್ರದಾಯ, ನಂಬಿಕೆ, ಆಚರಣೆಗಳು ನಮ್ಮ ಸಮಾಜದ ಸಾಂಸ್ಕೃತಿಕ

ಪರಂಪರೆಯ ಅಮೂಲ್ಯ ಭಾಗಗಳಾಗಿವೆ. ಅವು ಕಾಲಕ್ಕೆ ತಕ್ಕಂತೆ ವೈಜ್ಞಾನಿಕ ಚಿಂತನೆ ಮತ್ತು ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡು, ಒಳ್ಳೆಯ ಸಂಪ್ರದಾಯಗಳನ್ನು ಉಳಿಸಿಕೊಂಡು, ಮೂಢನಂಬಿಕೆ ಹಾಗೂ ಹಾನಿಕಾರಕ ಆಚರಣೆಗಳನ್ನು ತ್ಯಜಿಸುವುದು ಅಗತ್ಯವಾಗಿದೆ ಎನ್ನುವುದು ಎಸ್.ಜಿ. ಸಿದ್ದರಾಮಯ್ಯನವರ ಅಭಿಪ್ರಾಯವಾಗಿದೆ. ಒಳ್ಳೆಯ ಸಂಪ್ರದಾಯಗಳನ್ನು ಆಚರಿಸಿಕೊಂಡು, ಸಂಸ್ಕೃತಿಯನ್ನು ಕಾಪಾಡಿಕೊಂಡು ಪ್ರಗತಿಯತ್ತ ಸಾಗಿದಾಗ ಮಾತ್ರ ಉತ್ತಮ ಸಮಾಜವನ್ನು ಕಟ್ಟಲು ಸಾಧ್ಯ.

**ಕೊನೆ ಟಿಪ್ಪಣಿಗಳು:**

1. ದೇಜಗೌ, (2001), ಜಾನಪದ ಅಧ್ಯಯನ, ಮೈಸೂರು: ಡಿ.ವಿ.ಕೆ. ಮೂರ್ತಿ ಪ್ರಕಾಶನ, ಪು.ಸಂ. 338.
2. ಗಂಗಾನಾಯಕ್ ಕೆ.ಎನ್. (ಸಂ), (2011), ಕನ್ನಡ ಜನಪದ, ಮೈಸೂರು: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ (ಮೈಸೂರು ವಿಶ್ವವಿದ್ಯಾಲಯ), ಪು.ಸಂ. 93.
3. ಸಿದ್ದರಾಮಯ್ಯ ಎಸ್.ಜಿ., (2018), ಸಮಗ್ರ ಕಾವ್ಯ ಸಂಪುಟ–2, ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ, ಪು.ಸಂ. 350.
4. ಅದೇ, ಪು.ಸಂ. 110.
5. ಸಿದ್ದರಾಮಯ್ಯ ಎಸ್.ಜಿ., (2018), ಸಮಗ್ರ ಕಾವ್ಯ ಸಂಪುಟ–1, ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ, ಪು.ಸಂ. 117.
6. ಸಿದ್ದರಾಮಯ್ಯ ಎಸ್.ಜಿ., (2018), ಸಮಗ್ರ ಕಾವ್ಯ ಸಂಪುಟ–2, ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ, ಪು.ಸಂ. 325.
7. ಸಿದ್ದರಾಮಯ್ಯ ಎಸ್.ಜಿ., (2021), ಯರೆಬೇವು–ಆತ್ಮಕಥನ, ಬೆಂಗಳೂರು: ಬಹುರೂಪಿ ಬುಕ್ ಹಬ್, ಪು.ಸಂ. 33.
8. ಸಿದ್ದರಾಮಯ್ಯ ಎಸ್.ಜಿ., (2018), ಸಮಗ್ರ ಕಾವ್ಯ ಸಂಪುಟ–1, ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ, ಪು.ಸಂ. 411.
9. ಸಿದ್ದರಾಮಯ್ಯ ಎಸ್.ಜಿ., (2018), ಸಮಗ್ರ ಕಾವ್ಯ ಸಂಪುಟ–2, ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ, ಪು.ಸಂ. 34.